February 2014 | IJRSS | Volume 4, Issue 1 | ISSN: 2249-2496

# JALA – A Drama in a different Perspective

**Dr Munishamappa .A**
Associate Professor,
GFGC, Bangarapet, Kolar

## ಭಿನ್ನ ದೃಷ್ಟಿಕೋನದ ನಾಟಕ ‘ಜಲ’

**ಡಾ.ಎ.ಮುನಿಶಾಮಪ್ಪ**

ನವ್ಯೋತ್ತರ ಸಂದರ್ಭದ ಕನ್ನಡ ಸಾಹಿತಿಯಾದ ಡಾ.ಮ.ನ.ಜವರಯ್ಯನವರು ದಲಿತ–ಬಂಡಾಯ ಸಾಹಿತ್ಯ ಚಳವಳಿಯ ಪ್ರಮುಖ ಲೇಖಕರಲ್ಲಿ ಒಬ್ಬರು. ಸೃಜನಶೀಲ ಸಾಹಿತಿಯಾಗಿ, ವಿಮರ್ಶಕರಾಗಿ, ಸಂಶೋಧಕರಾಗಿ, ವೈಚಾರಿಕ ಚಿಂತಕರಾಗಿ ಕನ್ನಡ ಸಾಹಿತ್ಯ ವಲಯದಲ್ಲಿ ಮನಜ ಪ್ರಸಿದ್ಧರಾಗಿದ್ದಾರೆ. ಡಾ. ಅಂಬೇಡ್ಕರ್ ಅವರನ್ನು ಕುರಿತು ಅವರು ನಡೆಸಿರುವ ಅಧ್ಯಯನಗಳು ಮತ್ತು ಬರಹಗಳು ಅವರನ್ನು ಆ ವಿಷಯದಲ್ಲಿ ಅಧಿಕೃತ ಲೇಖಕರನ್ನಾಗಿಸಿವೆ. ಅವರ ಚಿಂತನೆಗಳು ಮತ್ತು ಬರಹಗಳು ಸಾಂಪ್ರದಾಯಿಕ ಚಿಂತನೆಗಳಿಗಿಂತ ತೀರ ಭಿನ್ನವಾಗಿರುತ್ತವೆ ಎಂಬುದು ಅವರ ಕೃತಿಗಳಿಂದ ವೇದ್ಯವಾಗುತ್ತದೆ. ಅಂತಹ ಕೃತಿಗಳಲ್ಲೊಂದು ಅವರ ನಾಟಕ “ಜಲ”. ಇದು ಗೌತಮ ಬುದ್ಧನನ್ನು ಕುರಿತದ್ದಾಗಿದ್ದು, ಆತನ ಪರಿವ್ರಾಜತೆಗೆ ನಿಜವಾದ ಕಾರಣವನ್ನು ಶೋಧಿಸಿರುವ ಕೃತಿಯಾಗಿದೆ.

ಬುದ್ಧನು ಸನ್ಯಾಸತ್ವವನ್ನು ಸ್ವೀಕರಿಸಿ ಅರಮನೆ ತ್ಯಜಿಸಲು ಆತ ನೋಡಿದ ಮೂರು ದೃಶ್ಯಗಳು – ಹೆಣ, ರೋಗಿ ಮತ್ತು ವೃದ್ಧ .ಕಾರಣ ಎಂಬುದಾಗಿ ಸಾಂಪ್ರದಾಯಿಕ ನೆಲೆಗಟ್ಟಿನ ಕೃತಿಗಳು ನಿರೂಪಿಸಿವೆ. ಸಿದ್ಧಾರ್ಥ ಗೌತಮನು ತನ್ನ ಇಪ್ಪತ್ತೊಂಭತ್ತನೆಯ ವಯಸ್ಸಿನವರೆಗೆ ಈ ಸಾಮಾನ್ಯ ಘಟನೆಗಳನ್ನು ನೋಡಿಯೇ ಇಲ್ಲ ಎಂಬ ವಿವರಣೆಯ ಬಗೆಗೆ ಡಾ.ಅಂಬೇಡ್ಕರ್ ಅವರು ಸಂದೇಹ ವ್ಯಕ್ತಪಡಿಸಿದ್ದಾರೆ. ಅವರ “ಬುದ್ಧ ಮತ್ತು ಆತನ ಧಮ್ಮ” ಎಂಬ ಕೃತಿಯ ಪೀಠಿಕೆಯಲ್ಲಿ ಅವರು ಹೀಗೆ ನುಡಿದಿದ್ದಾರೆ: “ಬುದ್ಧನು ಈ ಪರಿವ್ರಾಜತೆಯನ್ನು ಏಕೆ ತೆಗೆದುಕೊಂಡನು? ಇದಕ್ಕೆ ಸಾಂಪ್ರದಾಯಕ ಉತ್ತರವಾಗಿ, ಬುದ್ಧನು ಒಬ್ಬ ಸತ್ತ ಮಾನವನನ್ನು, ಒಬ್ಬ ರೋಗಿಷ್ಠನನ್ನು, ಮತ್ತು ಒಬ್ಬ ಅತೀ ವೃದ್ಧ ಮನುಷ್ಯನನ್ನು ನೋಡಿದುದರಿಂದ ಅವನು ಪರಿವ್ರಾಜತೆಯನ್ನು ತೆಗೆದುಕೊಂಡನೆಂಬುದು. ಇದರ ಮೌಖಿಕ ಮೌಲ್ಯ ಮಾಪನದಡಿಯಲ್ಲಿ ವಿವೇಚಿಸಿದರೆ, ಅದು ಅಸಂಬದ್ಧ. ಬುದ್ಧನು ಈ ಪರಿವ್ರಾಜತೆಯನ್ನು ಅವನ ಇಪ್ಪತ್ತೊಂಭತ್ತನೆಯ ವಯಸ್ಸಿನಲ್ಲಿ ತೆಗೆದುಕೊಂಡನು. ಬುದ್ಧನು ಈ ಮೂರು ದೃಶ್ಯಗಳನ್ನು ನೋಡಿದ್ದರಿಂದಲೇ ಪರಿವ್ರಾಜತೆಯನ್ನು ತೆಗೆದುಕೊಂಡನೆಂದೇ ಭಾವಿಸಿದರೂ, ಇದಕ್ಕೆ ಮೊದಲು ಆ ದೀರ್ಘಾವಧಿಯಲ್ಲಿ ಈ ಮೊದಲೇ ಆ ದೃಶ್ಯಗಳನ್ನು ಅವನು ನೋಡದೇ ಇರಲು ಹೇಗೆ ಸಾಧ್ಯ? ಆ ದೃಶ್ಯಗಳು ನೂರಾರು ಸಂಖ್ಯೆಯಲ್ಲಿ ಸದಾ ಸಂಭವಿಸುತ್ತಲೇ ಇರುವ ಅತಿ ಸಾಮಾನ್ಯ ಘಟನೆ ಮತ್ತು ಬುದ್ಧನು ಈ ಮೊದಲೆ ಆ ದೃಶ್ಯಗಳನ್ನು ನೋಡದೇ ಇರುವುದು ಸಾಧ್ಯವಿಲ್ಲ, ಆ ಬಗೆಯ ದೃಶ್ಯಗಳನ್ನು ಅದೇ ಮೊದಲ ಬಾರಿಗೆ ನೋಡಿದುದೆಂದು ನೀಡುವ ಆ ಸಾಂಪ್ರದಾಯಿಕ ವಿವರಣೆಯನ್ನೆಂದೂ ಒಪ್ಪಲು ಸಾಧ್ಯವಿಲ್ಲ. ಆ ವಿವರಣೆಯು ನ್ಯಾಯ ಸಮ್ಮತವಾಗದು.” ಹೀಗೆಂದು ಹೇಳಿ, ಅವರು ಕೃತಿಯ ಒಡಲಲ್ಲಿ ಬುದ್ಧನ ಪರಿವ್ರಾಜತೆಗೆ ನಿಜವಾದ ಕಾರಣವನ್ನು ವಸ್ತು ನಿಷ್ಠವಾಗಿ, ಬಹು ಸಂಖ್ಯಾತರಿಗೆ ಸಮ್ಮತವಾಗಬಹುದಾದ ರೀತಿಯಲ್ಲಿ ವಿವರಿಸಿದ್ದಾರೆ. ಆ ಭಾಗವನ್ನಷ್ಟೆ ಮನಜ ಅವರು ತಮ್ಮ ನಾಟಕಕ್ಕೆ ಮುಖ್ಯ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಅಂದರೆ “ಜಲ” ನಾಟಕಕ್ಕೆ ಮೂಲ ಪ್ರೇರಣೆ ಅಂಬೇಡ್ಕರ್ ಅವರ “ಬುದ್ಧ ಮತ್ತು ಆತನ ಧಮ್ಮ” ಎಂಬ ಕೃತಿ.

ಮನಜ ಅವರು ಮೂಲದ ಘಟನೆಯನ್ನು ಯಥಾವತ್ತಾಗಿ ಸ್ವೀಕರಿಸಿದ್ದಾರೆ. ಆದರೆ ಚಾರಿತ್ರಿಕ ಘಟನೆಯನ್ನು ನಾಟಕವನ್ನಾಗಿ ಪರಿವರ್ತಿಸುವಾಗ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡು ಕೆಲವು ಕಾಲ್ಪನಿಕ ಸನ್ನಿವೇಶಗಳನ್ನು ಸೃಷ್ಟಿಸಿ, ಸೂಕ್ತ ಸಂಭಾಷಣೆಯನ್ನು ಕಲ್ಪಿಸಿದ್ದಾರೆ. ಹಲವೆಡೆ ಸಣ್ಣಘಟನೆಗಳನ್ನು ವಿಸ್ತರಿಸಿ, ಮೂಲದಲ್ಲಿ ಇಪ್ಪತ್ತೈದು ಪುಟಗಳಲ್ಲಿ ನಿರೂಪಿತಗೊಂಡಿರುವ ಘಟನೆಯನ್ನು ಸುಮಾರು ನೂರ ಇಪ್ಪತ್ತೈದು ಪುಟಗಳ ನಾಟಕವನ್ನಾಗಿಸಿದ್ದಾರೆ.

**ಮೂಲ ಕೃತಿಯಲ್ಲಿರುವಂತೆ ಬುದ್ಧನ ಪರಿವ್ರಾಜತೆಗೆ ಕಾರಣ:** ಕಪಿಲವಸ್ತುವಿನಲ್ಲಿ ಶಕ್ಯನರ ಸಂಘವೊಂದಿದ್ದು, ಇಪ್ಪತ್ತು ವರ್ಷ ವಯಸ್ಸು ತುಂಬಿದ ಪ್ರತಿ ಯುವಕ ಶಕ್ಯನು ಈ ಸಂಘದ ಸದಸ್ಯನಾಗಬೇಕಿತ್ತು. ಈ ಸಂಘವು ರಾಜನಿಗೆ ಸಲಹೆಗಳನ್ನು ನೀಡುತ್ತಿತ್ತು. ಮತ್ತು ದೇಶ ದ್ರೋಹ ಅಥವಾ ಸಂಘ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಶಿಕ್ಷಿಸುವ ಅಧಿಕಾರವನ್ನು ಹೊಂದಿತ್ತು. ಇದಕ್ಕೆ ರಾಜನೂ ಹೊರತಾಗಿರಲಿಲ್ಲ. ಸಿದ್ಧಾರ್ಥನು ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಈ ಸಂಘದ ಸದಸ್ಯತ್ವವನ್ನು ಪಡೆಯುತ್ತಾನೆ.

ಸಿದ್ಧಾರ್ಥನು ಶಕ್ಯನರ ಸಂಘದ ಸದಸ್ಯತ್ವ ಪಡೆದ ಎಂಟು ವರ್ಷಗಳ ನಂತರ ನಡೆದ ದುರಂತ ಘಟನೆಯೊಂದು ಆತನ ಪರಿವ್ರಾಜತೆಗೆ ಕಾರಣವಾಗುತ್ತದೆ. ಶಕ್ಯನರ ರಾಜ್ಯದ ಗಡಿ ಪ್ರದೇಶವು ಪಕ್ಕದ ಕೊಲಿಯ ರಾಜ್ಯದ ಗಡಿ ಪ್ರದೇಶಕ್ಕೆ ಹೊಂದಿಕೊಂಡಿತ್ತು. ರೋಹಿಣಿ ನದಿಯು ಈ ಎರಡು ರಾಜ್ಯಗಳ ಗಡಿ ನೆಲೆಯನ್ನು ವಿಭಾಗಿಸಿತ್ತು. ಈ ಎರಡೂ ರಾಜ್ಯಗಳಲ್ಲಿನ ಬೆಳೆಗಳಿಗೆ ಈ ರೋಹಿಣಿ ನದಿಯ ನೀರು ಬಳಕೆಯಾಗುತ್ತಿತ್ತು. ಪ್ರತಿ ಬೆಳೆಯ ಬಿತ್ತನೆಯ ಕಾಲದಲ್ಲಿ ಈ ಎರಡೂ ರಾಜ್ಯಗಳವರಿಗೂ ನೀರಿನ ಬಳಕೆಯ ವಿಷಯದಲ್ಲಿ ವಿವಾದಗಳು ಉದ್ಭವಿಸುತ್ತಿದ್ದವು. ಅನೇಕ ವೇಳೆ ಈ ವಿವಾದಗಳು ಜಗಳಗಳಲ್ಲಿ, ಇನ್ನು ಕೆಲವೊಮ್ಮೆ ಯುದ್ಧಗಳಲ್ಲಿ ಮುಕ್ತಾಯಗೊಳ್ಳುತ್ತಿದ್ದವು.

ಸಿದ್ಧಾರ್ಥನು ಇಪ್ಪತ್ತೆಂಟನೆಯ ವಯಸ್ಸಿನಲ್ಲಿದ್ದಾಗ ಒಂದು ದೊಡ್ಡ ಹೊಡೆದಾಟವು ಶಕ್ಯನರ ಕೃಷಿಕ ಸೇವಕರಿಗೂ ಮತ್ತು ಕೊಲಿಯನ್ನರ ಕೃಷಿಕ ಸೇವಕರಿಗೂ ನಡೆಯಿತು.ಆಗ ಎರಡೂ ಕಡೆಯವರೂ ಗಾಯಗೊಂಡು ತೊಂದರೆಗೊಳಗಾದರು. ಈ ಸಮಸ್ಯೆಯನ್ನು ಒಂದೇ ಬಾರಿಗೆ ದೊಡ್ಡ ಯುದ್ಧ ಮಾಡುವುದರಿಂದ ಪರಿಹರಿಸಿಕೊಳ್ಳಬೇಕೆಂಬ ಭಾವನೆಯನ್ನು ಶಕ್ಯನರು ಮತ್ತು ಕೊಲಿಯನರು ತಳೆದರು. ಆದ್ದರಿಂದ ಶಕ್ಯನರ ಸೇನಾಪತಿಯು ಸಂಘದ ಸಭೆ ಕರೆದು ಯುದ್ಧ ಘೋಷಣೆಯ ತನ್ನ ನಿರ್ಧಾರವನ್ನು ಸಭೆಯ ಮುಂದೆ ಮಂಡಿಸಿದನು. ಮೂಲತಃ ಶಾಂತಿ ಪ್ರಿಯನಾದ ಸಿದ್ಧಾರ್ಥ ಈ ನಿರ್ಣಯವನ್ನು ವಿರೋಧಿಸಿದನು. ಯುದ್ಧ ನಿರ್ಣಯವನ್ನು ಅನುಮೋದಿಸುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಇದು ಮತ್ತೊಂದು ಯುದ್ಧಕ್ಕೆ ಬೀಜ ನೆಟ್ಟಂತಾಗುವುದು. ಆದ್ದರಿಂದ ಪರಸ್ಪರ ಮಾತುಕತೆಯಿಂದ ಈ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳೋಣ ಎಂಬುದಾಗಿ ತನ್ನ ಅಭಿಪ್ರಾಯವನ್ನು ತಿಳಿಸಿದನು. ಈ ಅಭಿಪ್ರಾಯವನ್ನು ಸಾಕಷ್ಟು ಮಂದಿ ಅನುಮೋದಿಸಿದರು. ಆದರೆ ಸೇನಾಪತಿ ಇದನ್ನು ಪ್ರಬಲವಾಗಿ ವಿರೋಧಿಸಿದನು. ಸಂಘದಲ್ಲಿ ಈ ವಿಚಾರದ ಪರ ಹಾಗು ವಿರೋಧದ ಗುಂಪುಗಳು ನಿರ್ಮಾಣವಾದವು. ಅಂತಿಮವಾಗಿ ಈ ನಿರ್ಣಯವನ್ನು ಜನಾಭಿಪ್ರಾಯಕ್ಕೆ ಹಾಕಲಾಯಿತು. ಸಿದ್ಧಾರ್ಥನ ಪರವಾದ ಗುಂಪು ಅಲ್ಪಸಂಖ್ಯಾತವಾಗಿದ್ದು, ಬಹು ಮತವುಳ್ಳವರನ್ನು ವಿರೋಧಿಸುವುದರಿಂದ ಆಗಬಹುದಾದ ಪರಿಣಾಮವನ್ನು ಊಹಿಸಿಕೊಂಡು ತಮ್ಮ ನಿರ್ಧಾರವನ್ನು ಸಭೆಯಲ್ಲಿ ಬಹಿರಂಗವಾಗಿ ವಿವರಿಸುವ ಧೈರ್ಯ ತೋರಲಿಲ್ಲ. ಆದ್ದರಿಂದ ಸೇನಾಪತಿಯ ಪರವಾಗಿ ಬಹುಮತ ಲಭಿಸಿತು. ಈ ವಿಚಾರದಲ್ಲಿ ಸೇನಾಪತಿ ಮತ್ತು ಸಿದ್ಧಾರ್ಥನ ನಡುವೆ ನಡೆದ ವಾಗ್ವಾದವು ತಾರಕಕ್ಕೇರಿ, ಕೊನೆಗೆ ಸಂಘದ ನಿರ್ಣಯವೆಂದು ಸಿದ್ಧಾರ್ಥನಿಗೆ ಮೂರು ಮಾರ್ಗಗಳನ್ನು ಉಳಿಸಿ, ಅವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವಂತೆ ಸೂಚಿಸಲಾಯಿತು.

ಅವುಗಳೆಂದರೆ:

1. ಶಕ್ಯನರ ಸೈನ್ಯ ಸೇರಿ ಯುದ್ಧದಲ್ಲಿ ಪಾಲ್ಗೊಳ್ಳುವುದು.

2. ಪಾಶಿ ಶಿಕ್ಷೆಗೆ ಅಥವಾ ದೇಶದಿಂದ ಗಡಿಪಾರು ಮಾಡುವುದಕ್ಕೆ ಒಪ್ಪಿಗೆ ನೀಡುವುದು.

3. ಅವರ ಮನೆತನದವರಿಗೆ ಸಾಮಾಜಿಕ ಬಹಿಷ್ಕಾರ ವಿಧಿಸಿ, ಅವರ ಆಸ್ತಿ ಪಾಸ್ತಿಗಳನ್ನೆಲ್ಲ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವೀಯುವುದು.

ಇವುಗಳಲ್ಲಿ ಸಿದಾರ್ಥ ಮೊದಲನೆಯದನ್ನು ಒಪ್ಪಿಕೊಳ್ಳಬಾರದೆಂಬುದಾಗಿ ಮೊದಲೇ ದೃಢ ನಿರ್ಧಾರ ತಳೆದಿದ್ದನು. ಅಂತೆಯೇ ಮೂರನೆಯದನ್ನು ಆರಿಸಿಕೊಳ್ಳುವುದು ಅವನ ಯೋಚನೆಗೆ

1. ನಿಲುಕದ್ದಾಗಿತ್ತು. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಎರಡನೆಯ ಮಾರ್ಗವೆ ಅವನ ಪಾಲಿಗೆ ಅತ್ಯುತ್ತಮವಾಗಿ ಗೋಚರಿಸಿತು. ಇದನ್ನು ವಿಧಿಸಲು ಸಂಘಕ್ಕೆ ವಿನಂತಿಸಿದನು. ಆದರೆ ಅಲ್ಲಿಯೂ ಒಂದು ತೊಡಕುಂಟಾಯಿತು. ಶಕ್ಯನರ ರಾಜ್ಯವು ಆ ಸಮಯದಲ್ಲಿ ಕೋಸಲ ದೇಶದ ದೊರೆಯ ಅಧೀನಕ್ಕೊಳಪಟ್ಟಿದ್ದು, ಶಕ್ಯನರು ಮಹತ್ವದ ನಿರ್ಣಯಗಳನ್ನು ಕೈಗೊಳ್ಳುವಾಗ ಕೋಸಲ ರಾಜನ ಅನುಮತಿ ಪಡೆಯಬೇಕಿತ್ತು. ಸಿದ್ಧಾರ್ಥನು ಗಡಿಪಾರು ಶಿಕ್ಷೆಯನ್ನು ಸ್ವಇಚ್ಛೆಯಿಂದಲೇ ಒಪ್ಪಿ ಅನುಭವಿಸಬಹುದಾದರೂ, ಕೋಸಲ ದೊರೆಯು ಯುವರಾಜನಿಗೆ ಇಂತಹ ಶಿಕ್ಷೆಯನ್ನು ಶಕ್ಯನರ ಸಂಘವೇ ವಿಧಿಸಿದೆಯೆಂದು ಭಾವಿಸಿ, ಸಂಘದ ವಿರುದ್ಧ ಕ್ರಮ ಜರುಗಿಸುತ್ತಾನೆ ಎಂಬುದಾಗಿ ಸೇನಾಪತಿ ಸಂದೇಹ ವ್ಯಕ್ತಪಡಿಸುತ್ತಾನೆ. ಈ ತೊಂದರೆಯಿಂದ ಪಾರಾಗಲು ಸ್ವತಃ ಸಿದ್ಧಾರ್ಥನೆ ಮತ್ತೊಂದು ಉಪಾಯವನ್ನು ಸೂಚಿಸುತ್ತಾನೆ. ಅದೆಂದರೆ "ತಾನೊಬ್ಬ ಭಿಕ್ಷಾಟನೆಯ ಸನ್ಯಾಸಿಯಾಗುವುದು. ಹಾಗೂ ಶಾಕ್ಯ ದೇಶವನ್ನೇ ತ್ಯಜಿಸುವುದು". ಇದು ಗಡಿಪಾರಿನ ಶಿಕ್ಷೆಯೂ ಆಯಿತು ಮತ್ತು ಕೋಸಲ ರಾಜನು ಸಂಘದ ವಿರುದ್ಧ ಕ್ರಮ ತೆಗೆದುಕೊಳ್ಳಲು ಅವಕಾಶವೂ ಇರುವುದಿಲ್ಲ. ಈ ನಿರ್ಣಯವು ಸಂದರ್ಭೋಚಿತವಾಗಿದೆಯೆಂಬುದು ಸೇನಾಪತಿಗೂ ಮನವರಿಕೆಯಾಯಿತು. ಆದ್ದರಿಂದ ಸಂಘದ ಸದಸ್ಯರು ಮತ್ತು ಸೇನಾಪತಿಯು ಇದನ್ನು ಒಪ್ಪಿದರು. ಅದರಂತೆ ಸಿದ್ಧಾರ್ಥ ತನ್ನ ತಂದೆ ತಾಯಿಗಳ ಮತ್ತು ಸತಿ ಯಶೋಧರೆಯ ಒಪ್ಪಿಗೆ ಪಡೆದು ಅವರೆಲ್ಲರ ಸಮ್ಮುಖದಲ್ಲಿಯೇ ಭರದ್ವಾಜ ಮುನಿಗಳಿಂದ ಸನ್ಯಾಸತ್ವದ ದೀಕ್ಷೆಯನ್ನು ಪಡೆದು ಬೀಳ್ಕೊಂಡು, ಶಾಕ್ಯ ರಾಜ್ಯವನ್ನು ತ್ಯಜಿಸಿ ಹೊರಡುತ್ತಾನೆ. – ಇದು ಅಂಬೇಡ್ಕರ್ ಅವರು 'ಬುದ್ಧ ಮತ್ತು ಆತನ ಧಮ್ಮ' ಎಂಬ ಕೃತಿಯಲ್ಲಿ ಕೊಟ್ಟಿರುವ ವಿವರಣೆ. (ಅನುವಾದ: ಎ.ಡಿ.ಕೃಷ್ಣಯ್ಯ, ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು. 1996)

ಮ.ನ.ಜವರಯ್ಯನವರು ತಮ್ಮ ಕೃತಿ 'ಜಲ'ದ ರಚನೆಯಲ್ಲಿ ಮೂಲ ಕೃತಿಗೆ ಪೂರ್ಣ ನಿಷ್ಠರಾಗಿದ್ದಾರೆ. ಆದರೆ ಕೆಲವು ಸನ್ನಿವೇಶಗಳನ್ನು ವಿಸ್ತರಿಸಿ, ಇನ್ನು ಕೆಲವೆಡೆ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡು, ಕೆಲವು ಕಾಲ್ಪನಿಕ ಘಟನೆಗಳನ್ನು ನಾಟಕಕ್ಕೆ ಸೇರಿಸಿದ್ದಾರೆ. ಕೃತಿಯ ಅಧ್ಯಯನದ ಸಂದರ್ಭದಲ್ಲಿ ಈ ಭಿನ್ನತೆಗಳನ್ನು ಗಮನಿಸುವುದು ಉಚಿತವಾಗಿದೆ.

ಅಂಬೇಡ್ಕರ್ ಅವರ "ಬುದ್ಧ ಮತ್ತು ಆತನ ಧಮ್ಮ" ಒಂದು ಸಂಶೋಧನ ಕೃತಿ, ಆಕರ ಗ್ರಂಥ. ಹಾಗಾಗಿ ಅದು ಹೆಚ್ಚು ವಸ್ತು ನಿಷ್ಠವಾಗಿದ್ದು, ಸಂಶೋಧನೆಯ ಗುಣವುಳ್ಳ ಕೃತಿಯಾಗಿದೆ. ಇಲ್ಲಿ ಸಾಹಿತ್ಯಿಕ ಅಂಶಗಳು ಗೌಣವಾಗಿವೆ. ಆದರೆ ಮನಜ ಅವರ 'ಜಲ' ಒಂದು ನಾಟಕ, ಅರ್ಥಾತ್ ಕಲಾಕೃತಿ. ಹಾಗಾಗಿ ಅದರಲ್ಲಿ ಕಲಾಕೃತಿಗೆ ಅಗತ್ಯವಿರುವ ಕಾಲ್ಪನಿಕ ಅಂಶಗಳು ಮತ್ತು ಸಾಹಿತ್ಯದ ಸೌಂದರ್ಯವಿದೆ. ಅಂದರೆ ಚರಿತ್ರೆಯ ಕೃತಿಯೊಂದನ್ನು

ಸಾಹಿತ್ಯ ಕೃತಿಯನ್ನಾಗಿ ಪರಿವರ್ತಿಸುವಾಗ ಅದರಲ್ಲಿಯೂ ರಂಗ ಕೃತಿಯನ್ನಾಗಿಸುವಾಗ ಚಾರಿತ್ರಿಕ ಸಂಗತಿಗಳನ್ನು ತಿರುಚಿ ಕಾಲ್ಪನಿಕ ಅಂಶಗಳನ್ನು ಸೇರಿಸುವುದು ಸಾಮಾನ್ಯ ಪ್ರಕ್ರಿಯೆ. ಆದರೆ ಮನಜ ಅವರು ಚಾರಿತ್ರಿಕ ಸಂಗತಿಗಳನ್ನು ಬದಲಾಯಿಸದೆ ಇತರ ಸಾಹಿತ್ಯಿಕ ಅಂಶಗಳನ್ನು ಸೇರಿಸಿದ್ದಾರೆ. ಸೃಜನಶೀಲ ಲೇಖಕರಾಗಿರುವ ಮನಜ ಅವರಿಗೆ ಈ ಕಲೆ ಚೆನ್ನಾಗಿ ಸಿದ್ಧಿಸಿದೆ.

'ಜಲ' ನಾಟಕದಲ್ಲಿ ಒಟ್ಟು ನಾಲ್ಕು ಅಂಕಗಳಿದ್ದು, ಇಪ್ಪತ್ತು ದೃಶ್ಯಗಳಿವೆ. ಮೊದಲನೆಯ ದೃಶ್ಯದಲ್ಲಿರುವ ಮೇಳಗೀತೆಯಲ್ಲಿ ನಾಟಕದ ವಸ್ತುವಿನ ಹಿನ್ನೆಲೆಯನ್ನು ವಿವರಿಸಲಾಗಿದೆ. ಜೊತೆಗೆ ಬುದ್ಧನ ವೈರಾಗ್ಯಕ್ಕೆ ಕಾರಣವಾದ ಅಂಶಗಳೆಂದು ಸಾಂಪ್ರದಾಯಿಕ ಕೃತಿಗಳು ನಿರೂಪಿಸಿರುವ ವಿವರಣೆಯನ್ನು ನಿರಾಕರಿಸಲಾಗಿದೆ. ಇಂಥ ವಿವರಣೆಯ ಹಿಂದೆ ಪಟ್ಟಭದ್ರ ಶಕ್ತಿಗಳ ಕುಟಿಲತೆ ಇದೆ ಎಂಬುದಾಗಿ ಪ್ರಸ್ತಾಪಿಸಲಾಗಿದೆ. ಇದರೊಂದಿಗೆ ನಿಜವಾದ ಚರಿತ್ರೆಯನ್ನು, ಸತ್ಯವನ್ನು ಶೋಧಿಸಿ ಹಾಡಿ, ಆಡಿ ತೋರಿಸುವುದಾಗಿ ಘೋಷಿಸಲಾಗಿದೆ.

ಕಪಿಲವಸ್ತು ಸಾಂಖ್ಯ ಮತ್ತು ಭರತವ್ಯಾಸ ಮುನಿಗಳ ತಪೋವನವಾಗಿದ್ದು, ಅಲ್ಲಿ ರೋಹಿಣಿ ನದಿ ಹರಿಯುತ್ತಿದೆ ಎಂದು ಹೇಳಿ ಮೇಳದವರು ಸಿದ್ಧಾರ್ಥನ ಜನನ ಮುಂತಾದ ಸಂಗತಿಗಳನ್ನು ವಿವರಿಸುತ್ತಾರೆ. ಮನಜ ಅವರು ರೋಹಿಣಿ ನದಿಗೆ ಪೌರಾಣಿಕ ಪರಿವೇಷವೊಂದನ್ನು ಕಲ್ಪಿಸಿದ್ದಾರೆ–ಚಂದ್ರನ ಸತಿ ರೋಹಿಣಿಯು ಭೂಲೋಕದಲ್ಲಿ ಸಂಚರಿಸುವ ಬಯಕೆಯನ್ನು ವ್ಯಕ್ತಪಡಿಸಿ, ಪತಿ ಚಂದ್ರನಿಂದ ಅನುಮತಿ ಪಡೆದು ಭೂಲೋಕದ ಕಪಿಲವಸ್ತುವಿನಲ್ಲಿ ನದಿಯಾಗಿ ಹರಿದಳೆಂದೂ, ಸಿದ್ಧಾರ್ಥನೂ ಸಹ ಪೌರ್ಣಿಮೆ ಪುತ್ರನಾಗಿ ಜನಿಸಿದನೆಂದೂ ಕೃತಿಯಲ್ಲಿ ಹೇಳಿದೆ.

ನಾಟಕದಲ್ಲಿರುವ ಪಾತ್ರಗಳ ಹೆಸರುಗಳಲ್ಲಿ ಕೆಲವು ಮೂಲ ಕೃತಿಯಲ್ಲಿ ಇಲ್ಲ. ಮುಖ್ಯ ಪಾತ್ರಗಳಾದ ಶುದ್ಧೋದನ, ಪ್ರಜಾಪತಿ, ಸಿದ್ಧಾರ್ಥ, ಯಶೋಧರೆ, ರಾಹುಲ, ಚೆನ್ನ ಮತ್ತು ಉದಯಿನ್ ಈ ಹೆಸರುಗಳು ಮಾತ್ರ ಮೂಲದಲ್ಲಿವೆ. ಅಲ್ಲಿ ಸೇನಾಪತಿಯ ಹೆಸರಿನ ಉಲ್ಲೇಖವಿಲ್ಲ. ಕಪಿಲವಸ್ತುವಿನ ಆಡಳಿತಾಧಿಕಾರಿ ಹುದ್ದೆಯ ಪ್ರಸ್ತಾಪವೇ ಮೂಲದಲ್ಲಿ ಇಲ್ಲ. ನಾಟಕದಲ್ಲಿ ಸೇನಾಪತಿಯ ಹೆಸರು ಯೋಧನೇತ ಎಂದೂ, ಆಡಳಿತಾಧಿಕಾರಿಯ ಹೆಸರು ನೀತಿಚಂದ್ರ ಎಂತಲೂ ಹೇಳಿರುವುದಲ್ಲದೆ ವಿಘ್ನಗುಪ್ತನೆಂಬ ವಣಿಕನ, ರಣತುಂಗ ಎಂಬ ಯುವಕನ ಹಾಗೂ ಸತ್ಯಕೀರ್ತಿ ಎಂಬ ಕವಿಯ ಪಾತ್ರಗಳನ್ನು ಸೃಷ್ಟಿಸಲಾಗಿದೆ. ಜೊತೆಗೆ ಅರಮನೆಯ ಸೇವಕ ಸೇವಕಿಯರ ಹೆಸರುಗಳೂ ಪ್ರಸ್ತಾಪವಾಗುತ್ತವೆ. ಇವೆಲ್ಲ ನಾಟಕಕಾರರ ಸ್ವಂತ ಕಲ್ಪನೆಗಳಾಗಿವೆ. ಹಾಗೆಯೇ ಸಿದ್ಧಾರ್ಥನ ದಾಯಾದಿ ದೇವದತ್ತ ಎಂಬ ಪಾತ್ರ ಮೂಲ ಕೃತಿಯಲ್ಲಿದೆ. ಬುದ್ಧನ ಬೇರೊಂದು ಜೀವನ ಚರಿತ್ರೆಯಲ್ಲಿ ದೇವದತ್ತ ಸಿದ್ಧಾರ್ಥನ ಚಿಕ್ಕಮ್ಮ ಪ್ರಜಾಪತಿಯ ಮಗ ಎಂಬ ಪ್ರಸ್ತಾಪವಿದೆ. ಆದರೆ ಪ್ರಸ್ತುತ ನಾಟಕದಲ್ಲಿ ಹಿಂದೆ ಕಪಿಲವಸ್ತುವಿನ ದೊರೆಯಾಗಿದ್ದ ಧನದತ್ತನ ಮಗ ದೇವದತ್ತ ಎಂದಿದೆ. ಲೇಖಕರ ಇಂತಹ ಬದಲಾವಣೆಗೆ ಚಾರಿತ್ರಿಕ ಆಧಾರವಿದೆಯೋ ಅಥವಾ ಇದೂ ಸಹ ಅವರ ಸ್ವಂತ ಕಲ್ಪನೆಯೋ ಎಂಬುದು ತಿಳಿಯುವುದಿಲ್ಲ. ಈ ದೇವದತ್ತನಿಗೆ ಸಿದ್ಧಾರ್ಥನ ಮೇಲೆ ಬಾಲ್ಯದಿಂದಲೂ ದ್ವೇಷವಿತ್ತು ಎಂಬುದರ ಸೂಚನೆ ಮೂಲದಲ್ಲಿಯೇ ಇದೆ. ಅದನ್ನು ನಾಟಕಕಾರರು ವಿಸ್ತರಿಸಿ, ಸಿದ್ಧಾರ್ಥನಿಗೆ ಶಾಕ್ಯ ಸಂಘದ ಸದಸ್ಯತ್ವ ನೀಡುವ ಸಂದರ್ಭದಲ್ಲಿ ದೇವದತ್ತ ಅದನ್ನು ವಿರೋಧಿಸಿದನೆಂದು ಕಲ್ಪಿಸಿದ್ದಾರೆ. ಉಳಿದಂತೆ ಶಾಕ್ಯ ಸಂಘದ ನಿಯಮಗಳು, ಅದರ ಸದಸ್ಯನಾಗಬಯಸುವವನಿಗೆ ಇರಬೇಕಾದ ಅರ್ಹತೆಗಳು, ಕರ್ತವ್ಯಗಳು ಮತ್ತು ಸಂಘದಿಂದ ವಜಾ ಮಾಡಲು ಇರುವ ನಿಯಮಗಳು ಇತ್ಯಾದಿಗಳೆಲ್ಲ ಮೂಲ ಕೃತಿಯಲ್ಲಿರುವಂತೆಯೇ ಇವೆ. ಆದರೆ ಸಿದ್ಧಾರ್ಥನು ಸಂಘದ ಸದಸ್ಯತ್ವವನ್ನು ಪಡೆದಾಗ ಶಾಕ್ಯರ ಜನದೇವತೆಯಾದ ವಸುಮಂಗಳೆಯ ಹೆಸರಿನಲ್ಲಿ ಪ್ರಮಾಣ ಮಾಡಿದನೆಂಬ ನಾಟಕಕಾರರ ಕಲ್ಪನೆ ಅಗತ್ಯವಿರಲಿಲ್ಲ.

ಸಿದ್ಧಾರ್ಥ ಗೌತಮನ ವ್ಯಕ್ತಿತ್ವವನ್ನು ನಾಟಕಕಾರರು ಸಾಂಪ್ರದಾಯಿಕ ಕೃತಿಗಳಲ್ಲಿರುವುದಕ್ಕಿಂತ ತೀರ ಭಿನ್ನವಾಗಿ ಚಿತ್ರಿಸಿದ್ದಾರೆ.ಇದಕ್ಕೆ ಮೂಲ ಕೃತಿಯಲ್ಲಿ ಆಧಾರವಿದೆ. ಬುದ್ಧನನ್ನು ಕುರಿತ ಬಹುತೇಕ ಗ್ರಂಥಗಳಲ್ಲಿ ಗೌತಮನಿಗೆ ಇಪ್ಪತ್ತೊಂಭತ್ತನೆಯ ವಯಸ್ಸಿನವರೆಗೂ ಅರಮನೆಯ ಹೊರಗಿನ ಜಗತ್ತಿನ ಪರಿಚಯವೇ ಇರಲಿಲ್ಲವೆಂಬಂತೆ, ಆತ ಕೇವಲ ಅರಮನೆಯ ಸುಖ ಭೋಗಗಳಲ್ಲಿ ಮಗ್ನವಾಗಿದ್ದ ರಾಜ ಕುಮಾರನಂತೆ, ಇನ್ನು ಜನ ಸಾಮಾನ್ಯರ ಸಂಪರ್ಕವಂತೂ ಇರಲೇ ಇಲ್ಲ ಎಂಬಂತೆ ಚಿತ್ರಿಸಲಾಗಿದೆ. ಆದರೆ ಅಂಬೇಡ್ಕರ್ ಅವರು ಜನ್ಮತಃ ಪ್ರತಿಭಾವಂತನೂ, ಕ್ರಿಯಾಶೀಲ ವ್ಯಕ್ತಿತ್ವದವನೂ, ಸಕಲ ವಿದ್ಯಾ ಪಾರಂಗತನೂ ಆಗಿದ್ದ ಸಿದ್ಧಾರ್ಥ ಅರಮನೆಯ ನಾಲ್ಕು ಗೋಡೆಗಳ ನಡುವೆಯೇ ಇದ್ದಿರಲು ಸಾಧ್ಯವೇ ಇಲ್ಲವೆಂದು ಭಾವಿಸಿ, ಆತನ ವ್ಯಕ್ತಿತ್ವವನ್ನು ಭಿನ್ನ ರೀತಿಯಲ್ಲಿ ಚಿತ್ರಿಸಿದ್ದಾರೆ. ಅದನ್ನೇ ಮನಜ ಅವರು ತಮ್ಮ ನಾಟಕದಲ್ಲಿ ಅನುಸರಿಸಿದ್ದಾರೆ.

ನಾಟಕದಲ್ಲಿ ನಿರೂಪಿತವಾಗಿರುವಂತೆ ಸಿದ್ಧಾರ್ಥ ಯುವರಾಜನಾದರೂ ಜನಸಾಮಾನ್ಯರೊಂದಿಗೆ ಬೆರೆಯುತ್ತಾನೆ, ಕೃಷಿಕರೊಂದಿಗೆ ಬೆರೆತು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾನೆ, ಅವರೊಂದಿಗೆ ಅನೇಕ ವಿಷಯಗಳನ್ನು ಕುರಿತು ಸಮಾಲೋಚಿಸುತಾನೆ, ಆತ ಜೀವ ಪ್ರೇಮಿ ಮತ್ತು ಆತ ವ್ಯಕ್ತಿಗಳ ಹುಟ್ಟನ್ನು ಲೆಕ್ಕಿಸದೆ ಅವರ ಯೋಗ್ಯತೆಯನ್ನು ಗೌರವಿಸುತ್ತಿದ್ದ ಎಂಬುದಕ್ಕೆ ಕೃತಿಯಲ್ಲಿ ದಾಖಲೆಯಿದೆ. ಉದಾಹರಣೆಗೆ ಮೂಲದಲ್ಲಿ ಚೆನ್ನ ಸಿದ್ಧಾರ್ಥನ ಆಪ್ತ ಸೇವಕ ಎಂದಷ್ಟೆ ಹೇಳಲಾಗಿದೆ. ಆದರೆ ಪ್ರಸ್ತುತ ನಾಟಕದಲ್ಲಿ ಅವನು ಚಂಡಾಲ ಕುಲದವನಾಗಿದ್ದು, ಅತ್ಯಂತ ಯೋಗ್ಯನೂ, ಉನ್ನತ ವ್ಯಕ್ತಿತ್ವವುಳ್ಳವನು. ಆದ್ದರಿಂದ ಅವನು ಸಿದ್ಧಾರ್ಥನಿಗೆ ಅಂಗ ರಕ್ಷಕನಾಗಿದ್ದಾನೆ. ಆತ ಸದ್ಗುಣಿ, ವಿನಯಶಾಲಿ, ಕುದುರೆ ಸವಾರಿ ಮತ್ತು ಕುದುರೆ ಪಳಗಿಸುವುದು ಮುಂತಾದ ಕೆಲಸಗಳಲ್ಲಿ ಅತ್ಯಂತ ನಿಪುಣ. ಸಿದ್ಧಾರ್ಥನಿಗೆ ಕುದುರೆ ಸವಾರಿ ಕಲಿಸಿದ್ದು ಇವನೆ, ಅಲ್ಲದೆ ಎರಡು ವರ್ಷದ ಮಗುವಿನಿಂದಲೂ ಸಿದ್ಧಾರ್ಥನನ್ನು ಹೆಗಲ ಮೇಲೆ ಹೊತ್ತು ಓಡಾಡಿದವನು, ಪ್ರಜಾಪತಿಯಿಂದ "ಸಿದ್ಧಾರ್ಥನಿಗೆ ಚೆನ್ನ ಅಮ್ಮನಿಗಿಂತ್ಲೂ ಚೆನ್ನ" ಎಂದು ಹೊಗಳಿಸಿಕೊಂಡವನು. ಇನ್ನು ಗೌತಮನಂತೂ ಚೆನ್ನನಂಥ ಇನ್ನೊಬ್ಬ ಶ್ರೇಷ್ಠ ವ್ಯಕ್ತಿಯನ್ನು ಶಾಕ್ಯರಲ್ಲಿ ಕಾಣಲು ಸಾಧ್ಯವಿಲ್ಲ ಎಂದಿದ್ದಾನೆ. ಹೀಗೆ ನಾಟಕಕಾರರು ಮೂಲದ ಸಂಗತಿಗಳನ್ನು ವಿಸ್ತರಿಸಿದ್ದಾರೆ.

ಚೆನ್ನ ಚಾಂಡಾಲ ಕುಲದವನೆಂಬುದಕ್ಕೆ ಆಧಾರವಿಲ್ಲ. (ಕನ್ನಡದಲ್ಲಿ ಡಾ.ನಿರುಪಮಾ ಎಂಬುವವರು ಬರೆದಿರುವ "ಗೌತಮ ಬುದ್ಧ" ಎಂಬ ಕೃತಿಯಲ್ಲಿ ಚೆನ್ನ ಅಗಸ ಜಾತಿಗೆ ಸೇರಿದವನೆಂದು ಹೇಳಲಾಗಿದೆ.) ಲೇಖಕರು ಆತನ ಹೆಸರನ್ನು ಗಮನಿಸಿ ಹೀಗೆ ಕಲ್ಪಿಸಿರಬಹುದು ಏಕೆಂದರೆ ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದ ಶಿವಶರಣರಲ್ಲಿ ಮಾದಾರ ಚೆನ್ನಯ್ಯನೆಂಬ ಅಸ್ಪೃಶ್ಯ ಶರಣನಿದ್ದು, ಆತ ಬಸವಣ್ಣನವರಿಂದ ಗೌರವಿಸಲ್ಪಟ್ಟಿದ್ದಾನೆ. ಆದ್ದರಿಂದ ಈ ಚೆನ್ನನೂ ಚಾಂಡಾಲ ಕುಲದವನಿರಹುದೆಂದು ಊಹಿಸಿದ್ದಾರೆ. ಇಲ್ಲಿ ಅವರ ದಲಿತಪ್ರಜ್ಞೆ ಜಾಗೃತವಾಗಿದೆಯೆನ್ನಬಹುದು. ಆದರೆ ಅಂದಿನ ಶ್ರೇಣೀಕೃತ ಸಮಾಜದಲ್ಲಿ ಚಾಂಡಾಲ ಕುಲಕ್ಕೆ ಸೇರಿದವನೊಬ್ಬ ಅರಮನೆಯಲ್ಲಿ ಯುವರಾಜನಿಗೆ ಅಂಗರಕ್ಷಕನಾಗಲು ಸಾಧ್ಯವಿತ್ತೆ ಎಂಬುದು ಸಂದೇಹಾಸ್ಪದವಾಗಿದೆ.

ನಾಟಕದಲ್ಲಿ ರೋಹಿಣಿ ನದಿಯ ದಡದಲ್ಲಿ ನಡೆಯಿತೆನ್ನಲಾದ ಘಟನೆಯೊಂದಿದೆ. ದೇವದತ್ತನು ಅಂಕಿತ ಎಂಬ ಕನ್ಯೆಯೊಬ್ಬಳನ್ನು ಬೈಯ್ದು ನದಿಗೆ ನೂಕಿದಾಗ ಸಿದ್ಧಾರ್ಥ ಆಕೆಯನ್ನು ರಕ್ಷಿಸಿದನು ಎಂಬ ಘಟನೆಗೆ ಸಾಕ್ಷಿಗಳು ಕವಿ ಸತ್ಯಕೀರ್ತಿ ಮತ್ತು ಚೆನ್ನ. ಮೂಲ ಕೃತಿಯಲ್ಲಿ ಈ ಘಟನೆಗೆ ಆಧಾರವಿಲ್ಲ. ಗೌತಮನ ಮಾನವೀಯಗುಣಗಳನ್ನು ತಿಳಿಸಲು ಮತ್ತು ಶಾಕ್ಯರ ನೀತಿ ಸಂಹಿತೆಯನುಸಾರ ಸಿದ್ಧಾರ್ಥ ನೆಲ, ಜಲ ಮತ್ತು ಜೀವಗಳ ರಕ್ಷಣೆಗೆ ಬದ್ಧವಾಗಿದ್ದನೆಂಬುದಾಗಿ ನಿರೂಪಿಸಲು ಲೇಖಕರು ಈ ಘಟನೆಯನ್ನು ಕಲ್ಪಿಸಿದ್ದಾರೆ.

ಮನಜ ಅವರು ಇನ್ನು ಕೆಲವು ಇಂತಹ ಕಾಲ್ಪನಿಕ ಸಂಗತಿಗಳನ್ನು ನಾಟಕದಲ್ಲಿ ಸೃಷ್ಟಿಸಿರುವುದಲ್ಲದೆ, ಮೂಲದ ಕೆಲವು ಘಟನೆಗಳನ್ನು ಅಲ್ಪ ಸ್ವಲ್ಪ ವ್ಯತ್ಯಾಸಗೊಳಿಸಿದ್ದಾರೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು:

1. ಶಾಕ್ಯರು ವರ್ಷಕ್ಕೊಮ್ಮೆ ವಸುಮಂಗಳ ಎಂಬ ಹಬ್ಬವನ್ನು ಆಚರಿಸುತ್ತಿದ್ದರು. ಆ ಸಮಯದಲ್ಲಿ ಸಂಪ್ರದಾಯದಂತೆ ಹಬ್ಬದ ಹಿಂದಿನ ದಿನ ರಾಜನಿರಲಿ ಸಾಮಾನ್ಯ ಪ್ರಜೆಯೇ ಇರಲಿ ಪ್ರತಿಯೊಬ್ಬರೂ ನೇಗಿಲು ಹಿಡಿದು ಭೂಮಿಯನ್ನು ಉಳುಮೆ ಮಾಡ ಬೇಕಾಗಿತ್ತು.

2. ಅಂಗರಕ್ಷಕನಾಗಿದ್ದ ಚೆನ್ನನನ್ನು ಸಿದ್ಧಾರ್ಥ ಅಂಗಾಧಿಪತಿಯನ್ನಾಗಿ ನಡೆಸಿಕೊಂಡಿದ್ದನು. ಚಾಂಡಾಲ ಕುಲದವನಾಗಿದ್ದ ಈತನಿಗೆ ಅಷ್ಟು ಪ್ರಾಶಸ್ತ್ಯ ನೀಡಿದ್ದರಿಂದ ಬ್ರಾಹ್ಮಣನಾದ ಮಹಾ ಮಂತ್ರಿ ಹಾಗು ಕ್ಷತ್ರಿಯನಾದ ಸೇನಾಪತಿ ಅಸಮಾಧಾನಗೊಂಡಿದ್ದರು.ಅದು ಶಾಕ್ಯ ಸಂಘದ ಸಭೆಯಲ್ಲಿ ಸ್ಫೋಟಗೊಂಡು ಆ ನಂತರದ ದುರಂತ ಘಟನೆಗಳಿಗೆ ಕಾರಣವಾಯಿತು.

3. ಮಾರ್ಕಂಡಯ್ಯ ಎಂಬ ಚಾಂಡಾಲ ವ್ಯಕ್ತಿ ಸತ್ತಾಗ ಆತನ ಶವ ಸಂಸ್ಕಾರಕ್ಕೆ ಏರ್ಪಾಡುಗಳನ್ನು ಗೌತಮನೆ ಮಾಡಿದ್ದಲ್ಲದೆ, ಆತನ ಶವದ ಮೇಲೆ ರೋಹಿಣಿ ನದಿಯ ಜಲ ಪ್ರೋಕ್ಷಣೆ ಮಾಡಿ, ಆ ಶವವನ್ನು ಮುಟ್ಟಿದ್ದನು.ಈ ಅಪರಾಧಕ್ಕಾಗಿ ಮಹಾಮಂತ್ರಿಗಳು, ಸೇನಾಪತಿ ಮತ್ತು ಆಡಳಿತಾಧಿಕಾರಿ ಇವರು ಗೌತಮನಿಗೆ ಶಿಕ್ಷೆ ವಿಧಿಸಲು ಸಿದ್ಧವಾಗಿದ್ದರು.

4. ಕೊಲಿಯಾ ರಾಜ್ಯದ ಗಡಿ ಗ್ರಾಮವೊಂದರ ಹುಡುಗಿಯೊಬ್ಬಳ ಮೇಲೆ ಶಾಕ್ಯ ರಾಜ್ಯದ ಯೋಧನೊಬ್ಬ ಅತ್ಯಾಚಾರ ನಡೆಸಿದ್ದಾನೆಂದು ಹಬ್ಬಿರುವ ಸುದ್ದಿ.

5. ದೇವದತ್ತ– ಗೌತಮರ ನಡುವೆ ಉಂಟಾಗಿದ್ದ ಬೇಟೆ ಪಕ್ಷಿ ವಿವಾದವನ್ನು ಮೂಲ ಕೃತಿಯಲ್ಲಿ ಪಂಚಾಯ್ತಿಯವರು ಬಗೆ ಹರಿಸಿದರು ಎಂದಿದೆ. ಪ್ರಸ್ತುತ ನಾಟಕದಲ್ಲಿ ಈ ವಿವಾದವನ್ನು ಭರತ ವ್ಯಾಸ ಮುನಿಗಳು ಬಗೆ ಹರಿಸುತ್ತಾರೆ.

6. ಮೂಲದಲ್ಲಿನ ಭಾರದ್ವಜಮುನಿಗಳು ಇಲ್ಲಿ ಭರತವ್ಯಾಸ ಮುನಿಗಳಾಗಿದ್ದಾರೆ. ಭಾರದ್ವಜ ಮುನಿಗಳು ಶಾಕ್ಯರ ರಾಜಕೀಯ ವ್ಯವಹಾರಗಳಲ್ಲಿ ಭಾಗವಹಿಸಿದ್ದರೆಂಬುದಕ್ಕೆ ದಾಖಲೆಯಿಲ್ಲ. ನಾಟಕದಲ್ಲಿ ಕೊಲಿಯಾದವರ ವಿರುದ್ಧ ಶಾಕ್ಯರು ಯುದ್ಧ ನಡೆಸಲು ಯೋಜಿಸಿದಾಗ ಭರತವ್ಯಾಸ ಮುನಿಗಳು ಯುದ್ಧ ತಂತ್ರಗಳನ್ನು ರೂಪಿಸುತ್ತಾರೆ. ಭಾರದ್ವಜ ಮುನಿಗಳು ಸಿದ್ಧಾರ್ಥನಿಗೆ ಸನ್ಯಾಸತ್ವದ ದೀಕ್ಷೆಯನ್ನು ನೀಡುತ್ತಾರೆ. ನಾಟಕದಲ್ಲಿ ಈ ಘಟನೆಯ ಪ್ರಸ್ತಾಪವಿಲ್ಲ.

7. ದೇವದತ್ತ ಕೋಲಿಯ ರಾಜ್ಯದ ಸೇನಾಪತಿಯನ್ನು ರಹಸ್ಯವಾಗಿ ಭೇಟಿಯಾಗಿ ರಾಜ ಶುದ್ಧೋದನನ ವಿರುದ್ಧ ಪಿತೂರಿ ನಡೆಸಿದ್ದನು. ಈ ದೇಶದ್ರೋಹದ ಕೃತ್ಯವನ್ನು ಬಯಲುಗೊಳಿಸಲು ಹೋಗಿದ್ದ ರಣತುಂಗ ಮತ್ತು ರೈತ ಮುಖಂಡ ಕೋಲಿಯಾ ರಾಜ್ಯದ ಸೈನಿಕರಿಂದ ಹತರಾಗುತ್ತಾರೆ.

8. ಮೂಲದಲ್ಲಿ ಸಿದ್ಧಾರ್ಥ ಅರಮನೆಯನ್ನು ಬಿಟ್ಟು ಹೋದರೂ ಶುದ್ಧೋದನ ರಾಜನಾಗಿಯೇ ಇರುತ್ತಾನೆ. ಗೌತಮ ಬುದ್ಧ ಏಳು ವರ್ಷಗಳ ನಂತರ ಕಪಿಲವಸ್ತುವಿಗೆ ಭೇಟಿ ಕೊಟ್ಟಾಗಲೂ ಶುದ್ಧೋದನನೇ ರಾಜನಾಗಿರುತ್ತಾನೆ. ಆದರೆ ನಾಟಕದಲ್ಲಿ ಸಿದ್ಧಾರ್ಥ ಸನ್ಯಾಸತ್ವ ಸ್ವೀಕರಿಸುವ ಮುಂಚೆಯೇ ಅಧಿಕಾರ ತ್ಯಜಿಸುತ್ತಾನೆ.

9. ಸಿದ್ಧಾರ್ಥ ಸನ್ಯಾಸತ್ವದ ದೀಕ್ಷೆ ಪಡೆದ ನಂತರ ಶಾಕ್ಯರ ನೀತಿ ಸಂಹಿತೆಯ ಪ್ರಕಾರ ಆತ ತನ್ನ ಪತ್ನಿ ಯಶೋಧರೆಯಿಂದ ಮೊದಲ ಭಿಕ್ಷೆ ಸ್ವೀಕರಿಸಿ ಕಪಿಲವಸ್ತುವನ್ನು ತೊರೆದನು ಎಂಬ ವಿವರಗಳು ಮೂಲ ಕೃತಿಯಲ್ಲಿಲ್ಲ. ನಾಟಕದಲ್ಲಿ ಹೀಗೆ ಭಿಕ್ಷೆ ಸ್ವೀಕರಿಸುವಾಗ ಯಶೋಧರೆ ತನ್ನ ಮಡಿಲಿನಿಂದ ಮೂರು ಬಾರಿ ಬರಿಗೈ

ಭಿಕ್ಷೆ ಹಾಕಿದಳೆಂದೂ, ಅದರ ಅರ್ಥ ತಿಳಿಯದೆ ವಿಚಲಿತನಾಗಿದ್ದ ಸಿದ್ಧಾರ್ಥನಿಗೆ ಪಕ್ಕದಲ್ಲಿದ್ದ ಚೆನ್ನ, ಯಶೋಧರೆಯು ತನ್ನ ಆಸೆ , ಸುಖ ಮತ್ತು ಯೌವ್ವನಗಳನ್ನು ನಿಮ್ಮ ಭಿಕ್ಷಾ ಕಪಾಲಕ್ಕೆ ಹಾಕಿದ್ದಾಳೆಂದು ತಿಳಿಸಿ ಆತನ್ನು ಅಪ್ಪಿಕೊಂಡು ಶೋಕಿಸುತ್ತಾನೆ. ಈ ಸಮಯದಲ್ಲಿ ಪ್ರಜಾಪತಿ ತಲೆ ಸುತ್ತಿ, ಕುಸಿದು ಬೀಳುತ್ತಾಳೆ. ಶುದ್ಧೋದನ ಮತ್ತು ಅರಮನೆಯ ಪರಿಚಾರಕರು ಆಕೆಯನ್ನು ಉಪಚರಿಸುತ್ತಾರೆ. ಆದರೆ ಸಿದ್ಧಾರ್ಥ ಮಾತ್ರ ತಾಯಿಯತ್ತ ನೋಡದೆ ಭಿಕ್ಷಾಟನಾ ಸನ್ಯಾಸಿಯಾಗಿ ಹೊರಡುತ್ತಾನೆ. ಮೂಲದಲ್ಲಿಲ್ಲದ ಈ ಘಟನೆಗಳು ಬಹಳ ನಾಟಕೀಯವಾಗಿ 'ಜಲ'ದಲ್ಲಿ ಮೂಡಿವೆ. ಇಂಥ ಕಡೆಯಲೆಲ್ಲ ನಾಟಕಕಾರರು ತಮ್ಮ ಸೃಜನಶೀಲತೆಯನ್ನು ಮೆರೆದಿದ್ದಾರೆ.

ಈ ವ್ಯತ್ಯಾಸಗಳನ್ನು ಹೊರತು ಪಡಿಸಿದರೆ ಉಳಿದ ಘಟನೆಗಳೆಲ್ಲ ಮೂಲ ಕೃತಿಯಲ್ಲಿರುವಂತೆಯೇ ಇವೆ. ಆದರೆ ಮೂಲದಲ್ಲಿರುವ ಸಿದ್ಧಾರ್ಥ ಸನ್ಯಾಸತ್ವದ ದೀಕ್ಷೆ ತೆಗೆದುಕೊಂಡ ಭಾಗವನ್ನು ಮನಜ ಅವರು ಬಿಟ್ಟಿದ್ದಾರೆ. ಮೂಲ ಕೃತಿಯಲ್ಲಿ ಅಂಬೇಡ್ಕರ್ ಅವರು ಆ ಸಂದರ್ಭದ ವಿಧಿವಿಧಾನಗಳನ್ನು ದೀರ್ಘವಾಗಿಯೇ ಸೂಕ್ಷ್ಮ ವಿವರಗಳೊಂದಿಗೆ ನಿರೂಪಿಸಿದ್ದಾರೆ:

ಪರಿವ್ರಾಜತೆಯನ್ನು ತೆಗೆದುಕೊಳ್ಳುವ ದಿನ ಮುಂಜಾನೆ ಅರಮನೆಯಿಂದ ತನ್ನ ಕುದುರೆ ಕಾಂತಕದ ಮೇಲೇರಿ ಭಾರದ್ವಜ ಮುನಿಗಳ ಆಶ್ರಮಕ್ಕೆ ಬಂದ ಸಿದ್ಧಾರ್ಥ, ಅಷ್ಟೊತ್ತಿಗಾಗಲೇ ಆಶ್ರಮದಲ್ಲಿದ್ದ ತನ್ನ ತಂದೆ ತಾಯಿಯರ ಆಶೀರ್ವಚನ ಪಡೆದು , ಅನಂತರ ಶೋಕ ತಪ್ತನಾಗಿದ್ದ ಚೆನ್ನನ ಬಳಿ ಸಾರಿ ತನ್ನ ಅಲಂಕೃತ ಉಡುಪು, ಹಾರಾಭರಣಗಳನ್ನು ಆತನಿಗಿತ್ತು, ಅವನ್ನು ತನ್ನ ಮನೆಗೆ ಕೊಂಡೊಯ್ಯಬೇಕೆಂದು ಹೇಳಿದನು. ತದನಂತರ ತನ್ನ ತಲೆಯ ಕೂದಲನ್ನು ತೆಗೆಯಿಸಿದನು. ಈತನ ದಾಯಾದಿ ಮಹಾನಾಮನು ಪರಿವ್ರಾಜತೆಯ ಸ್ವೀಕಾರ ಪ್ರಕರಣಕ್ಕೆ ತಕ್ಕಂತಹ ಉಡುಪನ್ನು ಮತ್ತು ಒಂದು ಭಿಕ್ಷಾ ಪಾತ್ರೆಯನ್ನು ತಂದಿದ್ದನು ಸಿದ್ಧಾರ್ಥನು ಆ ಉಡುಪನ್ನು ಧರಿಸಿ, ಭಿಕ್ಷಾ ಪಾತ್ರೆಯನ್ನು ಹಿಡಿದು, ಭಾರದ್ವಜರ ಬಳಿ ಸಾರಿ ಪರಿವ್ರಾಜತೆಯನ್ನು ಅನುಗ್ರಹಿಸಲು ಪ್ರಾರ್ಥಿಸಿದನು. ಭಾರದ್ವಜರು ತಮ್ಮ ಅನುಯಾಯಿಗಳ ನೆರವಿನಿಂದ ಈ ಸನ್ನಿವೇಶಕ್ಕೆ ಅವಶ್ಯವಿದ್ದ ಕ್ರಿಯಾತಂತ್ರಗಳನ್ನು ನೆರವೇರಿಸಿದರು. ಅನಂತರ ಸಿದ್ಧಾರ್ಥ ಗೌತಮನು ಪರಿವ್ರಾಜಿತನಾಗಿ ಅನುಗ್ರಹ ಪಡೆದಿರುವನೆಂಬ ಪ್ರಕಟಣೆಯನ್ನು ನೀಡಿದರು.

ಗೌತಮ ಬುದ್ಧನ ಜೀವನದಲ್ಲಿ ಅತ್ಯಂತ ಮುಖ್ಯವಾದ ಈ ಘಟನೆಯನ್ನು ಮನಜ ಅವರು ಏಕೆ ಬಿಟ್ಟಿದ್ದಾರೆಂಬುದು ತಿಳಿಯುವುದಿಲ್ಲ. ಈ ದೃಶ್ಯವನ್ನು ರಂಗದ ಮೇಲೆ ತರಲಾಗುವುದಿಲ್ಲವೆಂದೇನಾದರು ಬಿಟ್ಟಿರಬಹುದೆ ಎಂದರೆ ಅದು ನಿಜವಲ್ಲ. ಏಕೆಂದರೆ ತುಂಬಾ ನಾಟಕೀಯವಾದ ಈ ದೃಶ್ಯವನ್ನು ವೇದಿಕೆಯ ಮೇಲೆ ಸುಲಭವಾಗಿ ತರಬಹುದಾಗಿದೆ. ಪ್ರೇಕ್ಷಕರ ಅಥವಾ ಓದುಗರ ಮನ ಮುಟ್ಟುವಂಥ ಈ ದೃಶ್ಯವೊಂದನ್ನು ತಂದಿದ್ದರೆ ಕೃತಿಯ ಗಾತ್ರ ಅಷ್ಟೇನು ಹೆಚ್ಚಾಗುತ್ತಿರಲಿಲ್ಲ.

ಇನ್ನು ಯಶೋಧರೆಯ ಪಾತ್ರವಂತೂ ಪಾರಂಪರಿಕ ಕೃತಿಗಳಲ್ಲಿ ಮುನ್ನೆಲೆಗೆ ಬರುವುದೇ ಇಲ್ಲ. ಆಕೆಯ ವ್ಯಕ್ತಿತ್ವವೆಂತಹದ್ದು ಎಂಬುದು ಆ ಕೃತಿಗಳಲ್ಲಿ ತಿಳಿಯವುದಿಲ್ಲ. ಆದರೆ ನಾಟಕದಲ್ಲಿ ಈ ಪಾತ್ರ ಪ್ರಖರವಾಗಿ ಬೆಳಗುತ್ತದೆ. ಇದಕ್ಕೆ ಮೂಲಕೃತಿಯಲ್ಲಿ ಆಧಾರವಿದೆ.ಇಲ್ಲಿ ಆಕೆ ಪತಿಯ ಆಲೋಚನೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಾಜ್ಞಳಾಗಿದ್ದಾಳೆ. ಅಗತ್ಯವಿದ್ದಾಗ ರಾಜಕೀಯ ವ್ಯವಹಾರಗಳಲ್ಲಿ ಭಾಗವಹಿಸಿ ಪತಿಗೆ ಸೂಕ್ತ ಸಲಹೆಗಳನ್ನು ನೀಡಬಲ್ಲ ಮತ್ತು ತನ್ನ ಅಭಿಪ್ರಾಯಗಳನ್ನು ಮುಕ್ತವಾಗಿ ತಿಳಿಸಬಲ್ಲವಳಾಗಿದ್ದಾಳೆ. ಆಕೆ ಕಾವ್ಯ, ಶಾಸ್ತ್ರಗಳ ಜ್ಞಾನ ಹೊಂದಿದ್ದ ಸುಸಂಸ್ಕೃತ ಮಹಿಳೆಯಾಗಿಯೂ, ಕೆಲವೊಮ್ಮೆ ಹಾಸ್ಯ ಪ್ರವೃತ್ತಿಯುಳ್ಳವಳಾಗಿಯೂ ಕಾಣುತ್ತಾಳೆ. ಪತಿಯ ಯುದ್ಧ ವಿರೋಧಿ ನಿಲುವನ್ನು ಮೆಚ್ಚಿಕೊಂಡದ್ದಲ್ಲದೆ, ಅತ್ತೆ ಮಾವಂದಿರ ಹಾಗೂ ಮಗ ರಾಹುಲನ ಯೋಗಕ್ಷೇಮವನ್ನು

ತಾನು ನೋಡಿಕೊಳ್ಳುವುದಾಗಿಯೂ, ಅವರ ಚಿಂತೆ ಬೇಕಿಲ್ಲವೆಂದೂ ತನ್ನ ಪತಿಗೆ ಭರವಸೆ ನೀಡುವ ಯಶೋಧರೆ, ಸಿದ್ಧಾರ್ಥನ ಸಾಧನೆಗೆ ಬೆಂಬಲವಾಗಿ ನಿಲ್ಲುವ ಆದರ್ಶ ಸತಿಯಾಗಿ ಚಿತ್ರಿತವಾಗಿದ್ದಾಳೆ.

ಗೌತಮ ಬುದ್ಧನ ಜೀವನ ಕಥೆಗಳನ್ನು ಆಧರಿಸಿ ರಚಿತವಾದ ಇತರ ಕೃತಿಗಳಿಗಿಂತ ಭಿನ್ನ ದೃಷ್ಟಿಕೋನದ ಚಿಂತನೆ ಪ್ರಸ್ತುತ ಕೃತಿಯಲ್ಲಿದೆ ಎಂಬುದು ಮೇಲಿನ ವಿಶ್ಲೇಷಣೆಯಿಂದ ವೇದ್ಯವಾಗುತ್ತದೆ. ನಾಟಕದಲ್ಲಿ ಪ್ರಸ್ತುತಪಡಿಸಿರುವಂತೆ ಇದು ಸತ್ಯಶೋಧನೆ. ಸಿದ್ಧಾರ್ಥ ಅರಮನೆಯನ್ನು ತ್ಯಜಿಸಲು ಕಾರಣವೆಂದು ಸಾಂಪ್ರದಾಯಿಕ ಕೃತಿಗಳು ನಿರೂಪಿಸುವ ಅಂಶಗಳು ಇಲ್ಲಿ ಸಂಪೂರ್ಣ ಮರೆಗೆ ಸಂದಿವೆ. ಆ ಕೃತಿಗಳೆಲ್ಲ ಸಿದ್ಧಾರ್ಥ ರಾತ್ರೋ ರಾತ್ರಿ ತನ್ನ ತಂದೆ ತಾಯಿಯರನ್ನು, ಪತ್ನಿ ಪುತ್ರರರನ್ನು ತೊರೆದು ಹೋದನೆಂದು ಹೇಳಿ ಬುದ್ಧನ ಉದಾತ್ತ ವ್ಯಕ್ತಿತ್ವಕ್ಕೆ ಕಳಂಕ ಹಚ್ಚಿವೆ. ಪ್ರಸ್ತುತ ನಾಟಕ ಆ ಕಳಂಕವನ್ನು ತೊಡೆದು ಹಾಕಿರುವುದಲ್ಲದೆ, ಆತನ ತ್ಯಾಗ ಮತ್ತು ಅಹಿಂಸಾ ಮನೋ ಧರ್ಮವನ್ನು ಎತ್ತಿ ತೋರಿಸಿದೆ.

ಗ್ರಂಥ ಋಣ:


2. ಡಾ. ಬಿ.ಆರ್.ಅಂಬೇಡ್ಕರ್: ಬುದ್ಧ ಮತ್ತು ಆತನ ಧಮ್ಮ, (ಅನುವಾದ: ಎ.ಡಿ.ಕೃಷ್ಣಯ್ಯ ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು. 1996)
3. ಮನಜ: ಜಲ, ಬಹುಜನ ಮಾಧ್ಯಮ ಕೇಂದ್ರ, ರಾಮಕೃಷ್ಣ ನಗರ, ಮೈಸೂರು. 2004
4. ಡಾ. ನಿರುಪಮಾ : ಗೌತಮ ಬುದ್ಧ.


---------------ooooooo---------------